# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 923 |
| ಸದಸ್ಯರ ಹೆಸರು | : | ಶ್ರೀ ಎಂ.ಎಲ್ ಅನಿಲ್ ಕುಮಾರ್. |
| ಉತ್ತರಿಸುವ ದಿನಾಂಕ | : | 14.07.2023. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ / ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಡಿ.ಸಿ.ಸಿ. ಬ್ಯಾಂಕ್‌ಗೆ ನೀಡುವ ಎಸ್.ಹೆಚ್.ಜಿ. ಸಾಲ ಮತ್ತು ಎಸ್.ಹೆಚ್.ಜಿ. ಸಾಲಗಳಿಗೆ ನೀಡುವ ಸಬ್ಸಿಡಿಗಳ ಮಾನದಂಡವೇನು? (ಮಾಹಿತಿ ನೀಡುವುದು) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದಿಂದ ಎಸ್.ಹೆಚ್.ಜಿ ಗಳಿಗೆ ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಸಾಲ ನೀಡುವ ಯಾವುದೆ ಯೋಜನೆ ಇರುವುದಿಲ್ಲ.<br><br>ಎಸ್.ಹೆಚ್.ಜಿ ಗಳಿಗೆ ಇಲಾಖೆಯಿಂದ ನೇರವಾಗಿ ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆಯಡಿ ನೇರವಾಗಿ ಸಾಲ ನೀಡಲಾಗುವುದು.<br><br>ಸಬ್ಸಿಡಿ ನೀಡುವ ಬಗ್ಗೆ ಇರುವ ಮಾನದಂಡವನ್ನು ಅನುಬಂಧ-1 ರಲ್ಲಿ ನೀಡಿದೆ. |
| ಆ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮ/ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಡಿ.ಸಿ.ಸಿ. ಬ್ಯಾಂಕ್‌ಗೆ ನೀಡಿರುವ ಎಸ್.ಹೆಚ್.ಜಿ. ಸಾಲಗಳಲ್ಲಿ ಎಷ್ಟು ಎಸ್.ಹೆಚ್.ಜಿ.ಗಳಿಗೆ ಸಬ್ಸಿಡಿ ಬಂದಿದೆ. (ಕಳೆದ 5 ವರ್ಷಗಳ ನಿಗಮವಾರು, ಫಲಾನುಭವಿವಾರು ಸಂಪೂರ್ಣ ಮಾಹಿತಿ ನೀಡುವುದು) | ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆಯಡಿ ನೀಡಲಾಗುವ ಆರ್ಥಿಕ ನೆರವನ್ನು ಸಂಬಂಧಪಟ್ಟ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಯ ನಿಗಮಗಳ ಕಛೇರಿಗಳಿಂದ ನೇರವಾಗಿ ಹಣ ಬಿಡುಗಡೆ ಮಾಡಲಾಗುತ್ತದೆ.<br><br>ಡಿ.ಸಿ.ಸಿ. ಬ್ಯಾಂಕ್ ಮುಖಾಂತರ ಯಾವುದೇ ಸೌಲಭ್ಯ ಕಲ್ಪಿಸಿರುವುದಿಲ್ಲ. |
| ಇ) | ಸದರಿ ಮೊತ್ತವನ್ನು ಯಾವ ರೀತಿ ಸಂಘಗಳಿಗೆ ವರ್ಗಾಯಿಸಲಾಗಿದೆ? (ಕಳೆದ 5 ವರ್ಷಗಳಲ್ಲಿನ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆಗೊಂಡಿರುವ ಪ್ರತಿ ಎಸ್.ಹೆಚ್.ಜಿ. ಗಳ ಸಂಪೂರ್ಣವಾದ ಮಾಹಿತಿ ನೀಡುವುದು) | |

**ಸಂಖ್ಯೆ: ಸಕಇ 247 ಎಸ್‌ಡಿಸಿ 2023**

**(ಡಾ: ಹೆಚ್.ಸಿ. ಮಹಾದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

# ಅನುಬಂಧ-1

## ಮಾನದಂಡಗಳು:-

1) ಕನಿಷ್ಠ 10 ರಿಂದ 20 ಮಹಿಳೆಯರು ಸ್ವಸಹಾಯ ಗುಂಪಿನಲ್ಲಿ ಸದಸ್ಯರಿರತಕ್ಕದ್ದು. ಈ ಪೈಕಿ ಕನಿಷ್ಠ ಶೇ.80 ರಷ್ಟು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು. ಸದರಿ ಸ್ವ ಸಹಾಯ ಸಂಘ ನೊಂದಣಿಯಾದ ಸಂಘ ಆಗಿರಬೇಕು. ಸಂಘದ ಸದಸ್ಯರು ಬಿ.ಪಿ.ಎಲ್./ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಹೊಂದಿರಬೇಕು.

2) ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.

3) ಸಂಘದ ಸದಸ್ಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಆದಾಯ ಪ್ರಮಾಣ ಪತ್ರ ಹೊಂದಿರಬೇಕು ಹಾಗೂ 18 ವರ್ಷಕ್ಕೆ ಮೇಲ್ಪಟ್ಟಿರಬೇಕು.

4) ಒಬ್ಬ ಸದಸ್ಯರಿಗೆ ರೂ.25.000/- ರಂತೆ (ರೂ.15.000/- ಸಹಾಯಧನ ಮತ್ತು ರೂ.10.000/- ಸಾಲ) ಒಟ್ಟು 10 ಸದಸ್ಯರಿಗೆ ರೂ.2.50 ಲಕ್ಷ ನೀಡುವುದು. ಒಂದು ವೇಳೆ ಸಂಘದಲ್ಲಿ 10ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ, ಸದರಿ ಸಂಖ್ಯೆಗನುಗುಣವಾಗಿ ಸಾಲ ಮತ್ತು ಸಹಾಯಧನ ನೀಡುವುದು.

5) ಸದರಿ ಸ್ವಸಹಾಯ ಸಂಘ ಬರುವ ಆರ್ಥಿಕ ಚಟುವಟಿಕೆಗಳಾದ ಉತ್ಪಾದನಾ/ ಸೇವಾ ಘಟಕಗಳನ್ನು ಕೈಗೊಳ್ಳತಕ್ಕದ್ದು.

6) ಸದರಿ ಸಂಘ ಹಣಕಾಸಿನ ವಹಿವಾಟು ಮತ್ತು ಸಾಲ ಸಹಾಯಧನವನ್ನು ಬಳಸಿಕೊಳ್ಳುತ್ತಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ವಿವರಗಳೊಂದಿಗೆ ಸಲ್ಲಿಸತಕ್ಕದ್ದು.

7) ಪ್ರೇರಣಾ ಯೋಜನೆಯನ್ನು ಅಭಿವೃದ್ಧಿ ನಿಗಮರವರ ವ್ಯಾಪ್ತಿಯಲ್ಲಿ ಬರುವ ಫಲಾನುಭವಿಗಳಿಗೆ ಈ ಸೌಕರ್ಯಗಳನ್ನು ಒದಗಿಸುವುದು.

8) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಫಲಾನುಭವಿಗಳು ನಿಗಮಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

9) ಸ್ವಸಹಾಯ ಸಂಘದವರು ನಿಗಮಗಳಿಂದ ನೀಡಿದ ಸಾಲವನ್ನು ವಾರ್ಷಿಕವಾಗಿ ಶೇ.4ರ ಬಡ್ಡಿದರದಲ್ಲಿ ಸಾಲ ಮತ್ತು ಬಡ್ಡಿಯನ್ನು03 ವರ್ಷಗಳಲ್ಲಿ ಮಾಸಿಕ/ತ್ರೈಮಾಸಿಕ ಕಂತುಗಳಲ್ಲಿ ಮರು ಪಾವತಿ ಮಾಡತಕ್ಕದ್ದು.

10) ಪರಿಶಿಷ್ಟ ಪಂಗಡದ ಸ್ವ ಸಹಾಯ ಸಂಘದ ಸದಸ್ಯರುಗಳಲ್ಲಿ ಕನಿಷ್ಟ 80% ಸದಸ್ಯರು ಪರಿಶಿಷ್ಟ ಪಂಗಡದವರೇ ಆಗಿರಬೇಕು.